**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ**

**ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 12/2020

ಸಿ ಡಬ್ಲುಃ 01

ಪಿ ಡಬ್ಲುಃ 05

| | |
|---|---|
| ಸಾಕ್ಷಿದಾರರ ಹೆಸರು | ರಾಜು ವಾಲಿಕಾರ |
| ತಂದೆಯ ಹೆಸರು | ಯಲ್ಲಪ್ಪ |
| ವಯಸ್ಸು | 32 ವರ್ಷ |
| ಉದ್ಯೋಗ | ರೈತಾಪಿ |
| ವಾಸ್ತವ್ಯ | ಮುದ್ದಿನಕೊಪ್ಪ, ತಾಲೂಕು ಮುಂಡಗೋಡ. |

ಸಾಕ್ಷಿಯನ್ನು ದಿನಾಂಕ **08.01.2026.** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನನಗೆ ದಿನಾಂಕ ನೆನಪಿಲ್ಲ. ಸುಮಾರು 6 ವರ್ಷಗಳ ಹಿಂದೆ ನಾನು ಮತ್ತು ಮೃತ ಪರಮೇಶ ಓಣಿಕೇರಿ ಮುಂಡಗೋಡಿನ ಜಾತ್ರೆಗೆ ಬಂದಿದ್ದೇವು. ನಾವು ಜಾತ್ರೆಯನ್ನು ಮುಗಿಸಿಕೊಂಡು ಅಗಡಿ ಗ್ರಾಮಕ್ಕೆ ಹೊರಟಿದ್ದೇವು, ಆಗ 6 ನೇ ಕ್ರಾಸ ಹತ್ತಿರ , ಧರ್ಮಣ್ಣ ಬಮ್ಮಿಗಟ್ಟಿ ಅವರ ಹೊಲದ ಹತ್ತಿರ ಅಗಡಿ ಕಡೆಯಿಂದ ಒಬ್ಬ ಗಂಡು ಮಗ ಮತ್ತು ಒಬ್ಬ ಹೆಣ್ಣು ಮಗಳು ದ್ವಿಚಕ್ರ ವಾಹನದ ಮೇಲಾಗಿ ತಮ್ಮ ಸೈಡ್ ನ್ನು ಬಿಟ್ಟು , ನಾವು ಹೋಗುತ್ತಿದ್ದ ಎಡಬದಿಗೆ ಅತಿವೇಗದಿಂದ ಬಂದು ಡಿಕ್ಕಿಪಡಿಸಿರುತ್ತಾರೆ . ಸದರಿ ದ್ವಿಚಕ್ರ ವಾಹನವನ್ನು ಸದರಿ ಗಂಡು ಮಗ ಚಲಾಯಿಸುತ್ತಿದ್ದನು. ಡಿಕ್ಕಿಪಡಿಸಿದ ನಂತರ ನಾನು ಬಿದ್ದೆ. ಆದಾದ ಮೇಲೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ಸುಮಾರು 6 ದಿನಗಳ ನಂತರ ಹುಬ್ಬಳ್ಳಿಯ ಬಾಲಾಜಿ ಆಸ್ಪತ್ರೆಯಲ್ಲಿ ನನಗೆ ಎಚ್ಚರವಾಗಿರುತ್ತದೆ. ಸದರಿ ಅಪಘಾತದಿಂದಾಗಿ ನನಗೆ ತಲೆಗೆ ಮತ್ತು ಮುಖಕ್ಕೆ ಗಾಯಗಳಾಗಿರುತ್ತವೆ. ನಾನು ಸುಮಾರು 18 ದಿನಗಳ ಕಾಲ ಒಳರೋಗಿಯಾಗಿ ಬಾಲಾಜಿ ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇನೆ. ನಾನು ಯಾವುದೇ ದೂರನ್ನು ದಾಖಲಿಸಿದ್ದು ಇರುವುದಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ , ಅದರಲ್ಲಿರುವ ಸಹಿ ತನ್ನದಲ್ಲ, ತನಗೆ ದೂರಿನಲ್ಲಿ ಇರುವಂತೆ ಸಹಿ ಮಾಡಲು ಬರುವುದಿಲ್ಲ , ನಾನು ರಾಜು ಅಂತಾ ಮಾತ್ರ ಸಹಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ಅದೇ ರೀತಿ ಸಾಕ್ಷಿಯು ಪ್ರಥಮ ವರ್ತಮಾನ ವರದಿಯಲ್ಲಿರುವ ಸಹಿಯೂ ಸಹ ತನ್ನದಲ್ಲ ಎಂದು ನುಡಿಯುತ್ತಾರೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯೇ ಅಪಘಾತಪಡಿಸಿರುತ್ತಾನೆ.

**(ಈ ಹಂತದಲ್ಲಿ ಸ ಸ ಅ ರವರು ಮುಂದುವರೆದ ಮುಖ್ಯ ವಿಚಾರಣೆ ಸಮಯವಕಾಶ ಕೋರಿದ್ದು ಸಮಯವಕಾತ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರ ದ ನ್ಯಾದಂ ಮುಂಡಗೋಡ.